**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

ಸತ್ರ ಮೊಕದ್ದಮೆ ನಂಃ **95/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | - ಸುಮಂತ್ | | ಪಿಡಬ್ಲೂ - 01 |
| ತಂದೆಯ ಹೆಸರು | - ದೇವರಾಜ್ | | ಸಿಡಬ್ಲೂ - 01 |
| ವಯಸ್ಸು | - 28 ವರ್ಷ | | |
| ಉದ್ಯೋಗ | - ಅಮೆಜಾನ್ ಕಂಪನಿಯಲ್ಲಿ ಮ್ಯಾನೇಜರ್ ಆಗಿ ಕೆಲಸ | | |
| ವಾಸ ಸ್ಥಳ | - ಮೂಡಿಗೆರೆ | | |

ದಿನಾಂಕಃ 22.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

*(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಮೃತ ಕನಕ ನನ್ನ ತಾಯಿ. ಈ ದಿನ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿ ಗೊತ್ತು. ಚಾಸಾ.2 ಹೂವಪ್ಪ ಶೆಟ್ಟಿ ಗೊತ್ತು. ಚಾಸಾ.3 ನನ್ನ ಚಿಕ್ಕಮ್ಮ, ಚಾಸಾ.4 ನನ್ನ ಚಿಕ್ಕಪ್ಪ. ಚಾಸಾ.5 ನನ್ನ ಮಾವ. ಚಾಸಾ.6 ರವರು ನನ್ನ ತಾಯಿಯ ಅಣ್ಣನ ಮಗ. ಚಾಸಾ.7 ನನ್ನ ಅತ್ತೆಯ ಮಗ. ಚಾಸಾ.8 ರಿಂದ 11 ಗೊತ್ತು.

2. ನನ್ನ ತಂದೆ ಈಗ್ಗೆ 27 ವರ್ಷಗಳ ಹಿಂದೆ ಮೃತಪಟ್ಟಿದ್ದರು. ನಂತರ ನಾನು ಮತ್ತು ನನ್ನ ತಾಯಿ ಮೂಡಿಗೆರೆ ನಡುವಿನಮಾಕ್ಕಲ್ ನಲ್ಲಿರುವ ನನ್ನ ಅಜ್ಜ ಅಂದರೆ ನನ್ನ ತಾಯಿಯ ತಂದೆಯ ಮನೆಯಲ್ಲಿ ವಾಸವಾಗಿದ್ದರು. ಮೊದಲಿಗೆ ನನ್ನ ತಾಯಿ ಚೆನ್ನಾಗಿದ್ದರು, ಆದರೆ ನನ್ನ ಅಜ್ಜ ಮತ್ತು ಅಜ್ಜಿ ತೀರಿಕೊಂಡ ಬಳಿಕ ಅಂದರೆ ನನ್ನ ತಾಯಿ ಮೃತಪಡುವ ಒಂದು ವರ್ಷದ ಹಿಂದಿನಿಂದ ಆಕೆ ತನಗೆ ಮನೆಯಲ್ಲಿರಲು ಆಗುವುದಿಲ್ಲ ಎಂದು ಹೇಳಿ ಚಿಕ್ಕಮಗಳೂರಿನ ಬಸ್ ನಿಲ್ದಾಣ ಮತ್ತು ಐ.ಜಿ. ರಸ್ತೆಯ ಫುಟ್‌ಪಾತ್‌ನಲ್ಲಿ ತಿರುಗಾಡಿಕೊಂಡು ಇದ್ದರು ಮತ್ತು ಕೆಲವೊಮ್ಮೆ ಮನೆಗೆ ಬಂದು ಉಳಿದುಕೊಂಡು ಬೆಳಿಗ್ಗೆ ಪುನಃ ಮನೆಯಿಂದ ವಾಪಸ್ ಹೋಗುತ್ತಿದ್ದರು.

3. ದಿಃ 10-05-2024 ರಂದು ಬೆಳಿಗ್ಗೆ 6 ಗಂಟೆಗೆ ಚಾಸಾ.9 ಉಮೇಶ್ ರವರು ನನ್ನ ಮೊಬೈಲಿಗೆ ಫೋನ್ ಮಾಡಿ ಆ ದಿನ ಬೆಳಗಿನ ಜಾವ ಸುಮಾರು 2.30 ಗಂಟೆಗೆ ತಾನು ಐ.ಜಿ. ರಸ್ತೆಯಲ್ಲಿರುವ ಅಂಗಡಿಗಳಿಗೆ ಮತ್ತು ಬೇಕರಿಗಳಿಗೆ ಹಾಲನ್ನು ಹಾಕುತ್ತಿದ್ದಾಗ ನನ್ನ ತಾಯಿ ಐ.ಜಿ. ರಸ್ತೆಯಲ್ಲಿರುವ ಸುಪ್ರೀಮ್ ಮೆಡಿಕಲ್ಸ್ ಹತ್ತಿರ ಇರುವ ಫುಟ್‌ಪಾತ್ ನಲ್ಲಿ ಮಲಗಿದ್ದಾಗಿ, ಆಗ ಆರೋಪಿ ಆಕೆಯ ಹತ್ತಿರ ಹೋಗಿ ತನ್ನ ಕಾಲನ್ನು ಒತ್ತುವಂತೆ ಹೇಳಿದಾಗ ಆಕೆ ನಿನ್ನ ಕಾಲನ್ನು ನಾನು ಯಾಕೆ ಒತ್ತಬೇಕು ಹೋಗು ಎಂದು ಹೇಳಿದಾಗ ಆರೋಪಿಗೆ ಸಿಟ್ಟು ಬಂದು ಅಲ್ಲಿ ಬಿದ್ದಿದ್ದ ಒಂದು ಸೈಜ್ ಕಲ್ಲನ್ನು ತೆಗೆದುಕೊಂಡು ಬಂದು ನನ್ನ ತಾಯಿಯ ತಲೆಯ ಮೇಲೆ ಎತ್ತಿ ಹಾಕಿ ಆಕೆಯನ್ನು ಸಾಯಿಸಿದ್ದಾಗಿ, ಆಗ ತಾನು ಮತ್ತು ಚಾಸಾ.10 ರವಿರವರು ಆರೋಪಿಯನ್ನು ತಡೆಯಲು ಹೋದಾಗ ಆರೋಪಿ ಅವರನ್ನು ಕುರಿತು, ಸೂಳೆಮಕ್ಕಳಾ, ನೀವು ಬಿಡಿಸಲು ಬಂದರೆ ನಿಮಗೂ

ಹೊಡೆಯುತ್ತೇನೆ ಎಂದು ಹೆದರಿಸಿದ್ದಾಗಿ, ಆದರೂ ಸಹ ತಾನು ಮತ್ತು ಚಾಸಾ.10 ರವರು ಆರೋಪಿಯನ್ನು ತಡೆದು ಆಂಬ್ಯುಲೇನ್ಸ್ ಕರೆಸಿ ಅದರಲ್ಲಿ ನನ್ನ ತಾಯಿಯನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗಿ, ಅಲ್ಲಿ ವೈದ್ಯರು ನನ್ನ ತಾಯಿಯನ್ನು ಪರೀಕ್ಷಿಸಿ ಆಕೆ ಮೃತಪಟ್ಟಿದ್ದಾಗಿ ತಿಳಿಸಿದ್ದಾಗಿ ನನಗೆ ತಿಳಿಸಿದರು.

4. ನಂತರ ನಾನು ನನ್ನ ಚಿಕ್ಕಮ್ಮ ಮತ್ತು ಚಿಕ್ಕಪ್ಪನಾದ ಚಾಸಾ.3 ಮತ್ತು 4 ರವರಿಗೆ ಫೋನ್ ಮಾಡಿ ಸದರಿ ವಿಷಯವನ್ನು ತಿಳಿಸಿ ಬೇಗ ಬನ್ನಿ ಎಂದು ಕರೆದೆನು. ನಂತರ ನಾನು ಚಾಸಾ.3 ಮತ್ತು 4 ರವರೊಂದಿಗೆ ಐ.ಜಿ. ರಸ್ತೆಯಲ್ಲಿ ಸುಪ್ರೀಮ್ ಮೆಡಿಕಲ್ಸ್ ಹತ್ತಿರ ಇರುವ ಫುಟಪಾತ್ ಘಟನೆ ನಡೆದ ಸ್ಥಳಕ್ಕೆ ಹೋದೆವು. ನಂತರ ಅಲ್ಲಿಂದ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಹೋದೆವು. ಅಲ್ಲಿ ಇರಿಸಿದ್ದ ನನ್ನ ತಾಯಿಯ ಶವವನ್ನು ನೋಡಿದೆವು. ನನ್ನ ತಾಯಿಯ ತಲೆಯ ಎಡಭಾಗಕ್ಕೆ ಕಲ್ಲಿನ ಏಟು ಬಿದ್ದು ರಕ್ತಗಾಯವಾಗಿ ಆಕೆ ಮೃತಪಟ್ಟಿದ್ದಳು.

5. ನಂತರ ನಾನು ಅದೇ ದಿನ ಬೆಳಿಗ್ಗೆ 8 ಗಂಟೆಗೆ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಗೆ ಹೋಗಿ ತನ್ನ ತಾಯಿಯನ್ನು ಕೊಲೆ ಮಾಡಿದ್ದ ಆರೋಪಿಯ ಮೇಲೆ ಕ್ರಮ ಜರುಗಿಸುವಂತೆ ದೂರನ್ನು ಕೊಟ್ಟೆನು. ಸದರಿ ದೂರನ್ನು ನಾನೇ ಬರೆದಿದ್ದೇನೆ. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ದೂರನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪ್ರಥಮ ವರ್ತಮಾನ ವರದಿಯನ್ನು ತೋರಿಸಲಾಗಿ ಅದರ ಕಲಂ.12 ರಲ್ಲಿ ಇರುವ ತನ್ನ ಸಹಿಯನ್ನು

ನೋಡಿ ಗುರುತಿಸಿದ ಮೇರೆಗೆ ಸದರಿ ವರದಿಯನ್ನು ನಿ.ಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು.

6. ಸಾಕ್ಷಿಗೆ 2 ಫೋಟೋಗಳನ್ನು ತೋರಿಸಲಾಗಿ, ಅವುಗಳಲ್ಲಿ ತನ್ನ ತಾಯಿ ಕನಕರವರ ಶವ ಮತ್ತು ಆಕೆಗೆ ಆದ ಗಾಯಗಳು ಕಂಡುಬರುವುದಾಗಿ ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ನಿ.ಪಿ.3 ಮತ್ತು 4 ಎಂದು ಗುರುತಿಸಲಾಯಿತು. ಅವುಗಳ ಪೈಕಿ ನಿಪಿ.3 ಫೋಟೋದಲ್ಲಿ ತನ್ನ, ಚಾಸಾ.2, 3 ಮತ್ತು ಪೊಲೀಸರ ಇರುವಿಕೆ ಕಂಡುಬರುವುದಾಗಿ ಮತ್ತು ಅವುಗಳನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರದಲ್ಲಿ ಪೊಲೀಸರು ತೆಗೆದಿದ್ದಾಗಿ ನುಡಿದಿರುತ್ತಾರೆ. ದೂರು ಕೊಟ್ಟ ಬಳಿಕ ಪೊಲೀಸರು ಸದರಿ ಶವಗಾರದಲ್ಲಿ ನನ್ನ ತಾಯಿಯ ಶವ ತನಿಖೆಯನ್ನು ನಡೆಸಿದರು. ಆ ಸಮಯದಲ್ಲಿ ಮೇಲೆ ಗುರುತಿಸಿದ ಫೋಟೋಗಳನ್ನು ಪೊಲೀಸರು ತೆಗೆದಿದ್ದಾರೆ.

7. ನಂತರ ಅದೇ ದಿನ ಅಂದರೆ ದಿಃ 10-05-2024 ರಂದು ನಾನು ಮೇಲೆ ಹೇಳಿದಂತೆ ಚಿಕ್ಕಮಗಳೂರಿನ ಐ.ಜಿ. ರಸ್ತೆಯಲ್ಲಿರುವ ಸುಪ್ರೀಮ್ ಮೆಡಿಕಲ್ಸ್ ಹತ್ತಿರ ಇರುವ ಫುಟಪಾತ್ ನಲ್ಲಿ ಘಟನೆ ನಡೆದ ಸ್ಥಳಕ್ಕೆ ಪೊಲೀಸರು ಬಂದಿದ್ದರು. ಆಗ ನಾನು ಸ್ಥಳದಲ್ಲಿ ಹಾಜರಿದ್ದೆನು. ಆಗ ನನ್ನೊಂದಿಗೆ ಚಾಸಾ-5 ಪ್ರದೀಪ್ ಮತ್ತು ಚಾಸಾ-6 ಅವಿನಾಶ್ ರವರು ಇದ್ದರು. ಅವರ ಸಮಕ್ಷಮ ನಾನು ಪೊಲೀಸರಿಗೆ ಕೃತ್ಯ ನಡೆದ ಸ್ಥಳವನ್ನು ತೋರಿಸಿದೆನು. ಅಲ್ಲಿ ಪೊಲೀಸರು ಮಹಜರನ್ನು ಬರೆದುಕೊಂಡರು. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಮಹಜರನ್ನು ನಿ.ಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು. ಸದರಿ ಮಹಜರಿಗೆ ನಾನು, ಚಾಸಾ.5 ಮತ್ತು

ಚಾಸಾ.6 ರವರು ಸಹಿ ಮಾಡಿದ್ದೇವೆ. ಸದರಿ ಮಹಜರನ್ನು ಪೊಲೀಸರು ಮಧ್ಯಾಹ್ನ 12.30 ರಿಂದ 1.30 ಗಂಟೆಯವರೆಗೆ ಬರೆದುಕೊಂಡಿದ್ದಾರೆ. ಮಹಜರ್ ಸಮಯದಲ್ಲಿ ಪೊಲೀಸರು ಫೋಟೋವನ್ನು ತೆಗೆದುಕೊಂಡರು. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ, ಅದರಲ್ಲಿ ತನ್ನ ಇರುವಿಕೆಯನ್ನು ಗುರುತಿಸಿ ಘಟನಾ ಸ್ಥಳದಲ್ಲಿ ಮಹಜರ್ ಜರುಗಿಸುವ ಸಮಯದಲ್ಲಿ ಪೊಲೀಸರು ತೆಗೆದ ಫೋಟೋ ಅದೇ ಎಂದು ನುಡಿದಿರುತ್ತಾರೆ, ಸದರಿ ಫೋಟೋವನ್ನು ನಿ.ಪಿ.6 ಎಂದು ಗುರುತಿಸಲಾಯಿತು. ಸದರಿ ಫೋಟೋದಲ್ಲಿ ನನ್ನೊಂದಿಗೆ ಚಾಸಾ.5, 6 ಮತ್ತು ಪೊಲೀಸರ ಇರುವಿಕೆ ಕಂಡು ಬರುತ್ತದೆ.

8. ಸದರಿ ಪಂಚನಾಮೆಯನ್ನು ಜರುಗಿಸುವ ಸಮಯದಲ್ಲಿ ಪೊಲೀಸರು ರಸ್ತೆಯ ಬದಿಯಲ್ಲಿ ಬಿದ್ದಿದ್ದ ರಕ್ತದ ಕಲೆಗಳು, ಫುಟ್‌ಪಾತ್ ನಲ್ಲಿ ಬಿದ್ದಿದ್ದ ರಕ್ತದ ಕಲೆಗಳು ಮತ್ತು ಚರಂಡಿ ಬದಿಯಲ್ಲಿ ಬಿದ್ದಿದ್ದ ರಕ್ತದ ಕಲೆಗಳನ್ನು ಹತ್ತಿಯಿಂದ ಒರೆಸಿ ಸಂಗ್ರಹಿಸಿದರು ಮತ್ತು ರಕ್ತದ ಕಲೆಗಳಿಲ್ಲದ ಒಂದು ಹತ್ತಿಯನ್ನು ಸಹ ಮಾದರಿಗಾಗಿ ತೆಗೆದುಕೊಂಡರು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಒಂದು ಖಾಕಿ ಲಕೋಟೆಯಲ್ಲಿದ್ದ ಒಂದು ಸಾದಾ ಬ್ಯಾಂಡೇಜ್ ಬಟ್ಟೆಯನ್ನು ನೋಡಿ ಗುರುತಿಸಿ ಆ ದಿನ ಪೊಲೀಸರು ಸಂಗ್ರಹಿಸಿದ ರಕ್ತವಿಲ್ಲದ ಸಾದಾ ಬ್ಯಾಂಡೇಜ್ ಬಟ್ಟೆ ಅದೇ ಎಂದು ಎಂದು ನುಡಿದ ಮೇರೆಗೆ ಸದರಿ ರಕ್ತವಿಲ್ಲದ ಸಾದಾ ಬ್ಯಾಂಡೇಜ್ ಬಟ್ಟೆಯನ್ನು ಮು.ಮಾ.1 ಎಂದು ಗುರುತಿಸಲಾಯಿತು.

9. ಸಾಕ್ಷಿಯು ಒಂದು ಖಾಕಿ ಲಕೋಟೆಯಲ್ಲಿದ್ದ ಒಂದು ರಕ್ತಮಿಶ್ರಿತ ಬ್ಯಾಂಡೇಜ್ ಬಟ್ಟೆಯನ್ನು ನೋಡಿ ಗುರುತಿಸಿ ಆ ದಿನ ಪೊಲೀಸರು ರಸ್ತೆಯ ಬದಿಯಲ್ಲಿದ್ದ ರಕ್ತವನ್ನು ಸಂಗ್ರಹಿಸಿದ್ದ ಬ್ಯಾಂಡೇಜ್ ಬಟ್ಟೆ ಅದೇ

ಎಂದು ಎಂದು ನುಡಿದ ಮೇರೆಗೆ ಸದರಿ ರಕ್ತಮಿಶ್ರಿತ ಬ್ಯಾಂಡೇಜ್ ಬಟ್ಟೆಯನ್ನು ಮು.ಮಾ.2 ಎಂದು ಗುರುತಿಸಲಾಯಿತು.

10. ಸಾಕ್ಷಿಯು ಒಂದು ಖಾಕಿ ಲಕೋಟೆಯಲ್ಲಿದ್ದ ಒಂದು ರಕ್ತಮಿಶ್ರಿತ ಬ್ಯಾಂಡೇಜ್ ಬಟ್ಟೆಯನ್ನು ನೋಡಿ ಗುರುತಿಸಿ ಆ ದಿನ ಪೊಲೀಸರು ಫುಟ್‌ಪಾತ್ ಮತ್ತು ಫುಟ್‌ಪಾತ್ ನಿಂದ ಚರಂಡಿಯವರೆಗೆ ಹರಿದಿದ್ದ ರಕ್ತವನ್ನು ಸಂಗ್ರಹಿಸಿದ್ದ ಬ್ಯಾಂಡೇಜ್ ಬಟ್ಟೆ ಅದೇ ಎಂದು ಎಂದು ನುಡಿದ ಮೇರೆಗೆ ಸದರಿ ರಕ್ತಮಿಶ್ರಿತ ಬ್ಯಾಂಡೇಜ್ ಬಟ್ಟೆಯನ್ನು ಮು.ಮಾ.3 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಫುಟ್ ಪಾತ್ ಬರದಿಯಲ್ಲಿದ್ದ ಮಣ್ಣನ್ನು ಸಹ ಪೊಲೀಸರು ಸಂಗ್ರಹಿಸಿದ್ದರು ಎನ್ನುತ್ತಾರೆ.

11. ನನ್ನ ತಾಯಿ ಮೃತಪಡುವ ಸಮಯದಲ್ಲಿ ಕಿತ್ತಲೆ ಬಣ್ಣದ ಹೂಗಳ ಡಿಸೈನ್ ಇದ್ದ ಚೂಡಿದಾರ ಟಾಪ್, ನೀಲಿ ಬಣ್ಣದ ಸೀರೆಯನ್ನು ಧರಿಸಿದ್ದರು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಕಿತ್ತಲೆ ಬಣ್ಣದ ಹೂಗಳ ಡಿಸೈನ್ ಇದ್ದ ಚೂಡಿದಾರ ಟಾಪ್ ನ್ನು ನೋಡಿ ಗುರುತಿಸಿ ಮೃತಪಟ್ಟಿದ್ದ ಸಮಯದಲ್ಲಿ ನನ್ನ ತಾಯಿ ಧರಿಸಿದ್ದ ಬಟ್ಟೆಗಳು ಅವೇ ಎಂದು ನುಡಿದಿರುತ್ತಾರೆ. ಸದರಿ ಚೂಡಿದಾರ್ ಟಾಪ್ ಮತ್ತು ಸೀರೆಯನ್ನು ಕ್ರಮವಾಗಿ ಮು.ಮಾ.4 ಮತ್ತು ಮು.ಮಾ.5 ಎಂದು ಗುರುತಿಸಲಾಯಿತು.

12. ಸಾಕ್ಷಿಯು ಮು.ಮಾ.1 ರಿಂದ ಮು.ಮಾ.3 ರ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ಮು.ಮಾ.1(ಎ), ಮು.ಮಾ.2(ಎ) ಮತ್ತು ಮು.ಮಾ.3(ಎ) ಎಂದು ಗುರುತಿಸಲಾಯಿತು.

(ಈ ದಿನ ಮುದ್ದೆ ಮಾಲು 1 ರಿಂದ 5 ಎಂದು ಗುರುತಿಸಲ್ಪಟ್ಟ ವಸ್ತುಗಳನ್ನು ಪ್ಯಾಕ್ ಮಾಡಿ ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದು, ಅವುಗಳನ್ನು ಈ ದಿನ ತೆರೆದ ನ್ಯಾಯಾಲಯದಲ್ಲಿ ಆರೋಪಿ, ಆತನ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿರುತ್ತದೆ.)

13. ಎಲ್ಲಾ ಪ್ರಕ್ರಿಯೆಗಳನ್ನು ಮುಗಿಸಿದ ಬಳಿಕ ಪೊಲೀಸರು ನನ್ನ ತಾಯಿಯ ಶವವನ್ನು ನನಗೆ ನೀಡಿ ರಸೀದಿಯನ್ನು ಪಡೆದುಕೊಂಡರು.

14. ದಿಃ 03-07-2024 ರಂದು ಪೊಲೀಸರು ನನ್ನನ್ನು ಚಿಕ್ಕಮಗಳೂರಿನ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದರು. ಅಲ್ಲಿ ನ್ಯಾಯಾಧೀಶರು ನನ್ನನ್ನು ವಿಚಾರಿಸಿದರು, ಆಗ ನಾನು ಅವರಿಗೆ ನಡೆದ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರವಾಗಿಃ LADCS ನ Deputy Chief Defense counsel ಆದ ಶ್ರೀ ಎನ್ ಡಿ ವಕೀಲರಿಂದಃ**

15. ನಾನು ಬಿ.ಎಸ್.ಸಿ ಪದವೀಧರ. ನಾನು ಆರೋಪಿಯನ್ನು ಹಿಂದೆ ನೋಡಿರಲಿಲ್ಲ. ಆರೋಪಿಯನ್ನು ಈ ದಿನ ಮೊದಲ ಭಾರಿಗೆ ನ್ಯಾಯಾಲಯದಲ್ಲಿ ನೋಡಿದ್ದೀರಿ ಎಂದರೆ ಸಾಕ್ಷಿ ದೂರನ್ನು ನೀಡಲು ಠಾಣೆಗೆ ಹೋದಾಗ ನೋಡಿದ್ದೇನೆ ಮತ್ತು ಬೆಳಿಗ್ಗೆ 9 ರಿಂದ 11 ಗಂಟೆಯವರೆಗೆ ಸ್ಥಳದಲ್ಲಿ ಪೊಲೀಸರು ಮಹಜರ್ ಜರುಗಿಸಿದ ಸಮಯದಲ್ಲಿ ಆರೋಪಿಯನ್ನು ಸ್ಥಳದಲ್ಲಿ ನೋಡಿದ್ದೆನು ಎನ್ನುತ್ತಾರೆ. ಆ ರೀತಿ ನೀವು ಹೇಳಿದಂತೆ ಆರೋಪಿಯನ್ನು ನೋಡದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

16. ನನ್ನ ತಾಯಿ ಮೃತಪಡುವ 2 ವರ್ಷಗಳ ಹಿಂದಿನಿಂದ ನನಗೆ ಚಾಸಾ.9 ರವರ ಪರಿಚಯ ಇತ್ತು. ಚಾಸಾ.9 ರವರು ನನಗೆ ಸಂಬಂಧಿಕರಲ್ಲ. ಅವರು ನಿಮಗೆ ಹೇಗೆ ಪರಿಚಯ ಎಂದರೆ ಸಾಕ್ಷಿ ನಾನು ಕೆಲವೊಮ್ಮೆ ನನ್ನ ತಾಯಿಯನ್ನು ಬೆಳಗಿನ ಜಾವದಲ್ಲಿ ಹುಡುಕಿಕೊಂಡು ಹೋಗುತ್ತಿದ್ದಾಗ ಹಾಲನ್ನು ಹಾಕಲು ಬರುತ್ತಿದ್ದ ಚಾಸಾ.9 ರವರ ಪರಿಚಯ ಆಗಿತ್ತು ಎನ್ನುತ್ತಾರೆ. ಆ ರೀತಿ ನೀವು ಹೋಗುತ್ತಿದ್ದಾಗ ಕೇವಲ ಚಾಸಾ.9 ರವರ ಪರಿಚಯ ಮಾತ್ರ ಆಗಿತ್ತೇ ಅಥವಾ ಬೇರೆಯವರ ಪರಿಚಯವಾಗಿತ್ತೇ ಎಂದರೆ ಸಾಕ್ಷಿ ಬೇರೆಯವರ ಪರಿಚಯವು ಆಗಿತ್ತು ಎನ್ನುತ್ತಾರೆ. ಆ ರೀತಿ ಪರಿಚಯವಾದವರು ಯಾರು ಎಂದರೆ ಸಾಕ್ಷಿ ಪೇಪರ್ ಹಾಕುವ ಲೋಹಿತ್ ಮತ್ತು ಇನ್ನೂ ಕೆಲವರು ಪರಿಚಯವಾಗಿದ್ದರು, ಅವರ ಮುಖ ಪರಿಚಯವಿದೆ ಆದರೆ ಹೆಸರು ಗೊತ್ತಿಲ್ಲ ಎನ್ನುತ್ತಾರೆ. ಸದರಿ ಲೋಹಿತ್ ರವರು ಯಾವ ಊರಿನವರು ಎಂದರೆ ಸಾಕ್ಷಿ ಅವರ ಊರನ್ನು ವಿಚಾರಿಸಿ ತಿಳಿದುಕೊಳ್ಳುವಷ್ಟು ಪರಿಚಯವಾಗಿರಲಿಲ್ಲ ಎನ್ನುತ್ತಾರೆ.

17. ಚಾಸಾ.9 ರವರು ಯಾವ ಊರಿನವರು, ಅವರು ಎಲ್ಲಿ ವಾಸವಾಗಿದ್ದಾರೆ ಎಂದರೆ ಸಾಕ್ಷಿ ಅದನ್ನು ನಾನು ವಿಚಾರಿಸಿಲ್ಲ, ಆದರೆ ನನ್ನ ತಾಯಿಯನ್ನು ನೋಡಿಕೊಂಡು ಬರಲು ಹೋಗುತ್ತಿದ್ದಾಗ ನನಗೆ ಅವರ ಪರಿಚಯವಾಗಿತ್ತು, ನಾನು ಅವರಿಗೆ ನನ್ನ ಮೊಬೈಲ್ ನಂಬರನ್ನು ಕೊಟ್ಟು ಬಂದಿದ್ದೆನು ಎನ್ನುತ್ತಾರೆ. ಚಾಸಾ.9 ರವರು ಎಷ್ಟು ಬಾರಿ ನಿಮಗೆ ಫೋನ್ ಮಾಡಿದ್ದರು ಎಂದರೆ ಸಾಕ್ಷಿ ಒಂದೇ ಬಾರಿ ಅಂದರೆ ನನ್ನ ತಾಯಿ ಮೃತಪಟ್ಟಿದ್ದ ವಿಚಾರವನ್ನು ತಿಳಿಸಲು ಎನ್ನುತ್ತಾರೆ. ಚಾಸಾ.9 ರವರು ನಿಮಗೆ ಪರಿಚಯವಾಗಿದ್ದಾಗಿ, ನೀವು ನಿಮ್ಮ ಮೊಬೈಲ್ ನಂಬರನ್ನು ಅವರಿಗೆ ಕೊಟ್ಟಿದ್ದಾಗಿ, ಅವರು ನಿಮಗೆ

ಫೋನ್ ಮಾಡಿ ನಿಮ್ಮ ತಾಯಿಯನ್ನು ಆರೋಪಿ ಕೊಲೆ ಮಾಡಿದ್ದ ವಿಚಾರವನ್ನು ತಿಳಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

18. ಚಿಕ್ಕಮಗಳೂರಿನ ಕೆ.ಎಸ್.ಆರ್.ಟಿ.ಸಿ. ಮತ್ತು ಖಾಸಗಿ ಬಸ್ ನಿಲ್ದಾಣಗಳಲ್ಲಿ ಮತ್ತು ಐ.ಜಿ. ರಸ್ತೆಯ ಫುಟ್ ಪಾತ್ ನಲ್ಲಿ ಸಾಮಾನ್ಯವಾಗಿ ಬಿಕ್ಷುಕರು ಮಲಗುತ್ತಾರೆ ಎಂದರೆ ಸರಿ. ಅವರು ಬಿಕ್ಷೆ ಬೇಡಿ ಹಣವನ್ನು ಸಂಗ್ರಹಿಸುವ ವಿಚಾರದಲ್ಲಿ ತಮ್ಮ ತಮ್ಮಲ್ಲಿ ಗಲಾಟೆ ಮಾಡಿಕೊಳ್ಳುತ್ತಾರೆ ಎಂದರೆ ಸಾಕ್ಷಿ ಆಗಾಗ್ಗೆ ಆ ರೀತಿ ಆಗುತ್ತದೆ ಎನ್ನುತ್ತಾರೆ. ಆ ರೀತಿ ನಿಮ್ಮ ತಾಯಿ ಬಿಕ್ಷುಕರೊಂದಿಗೆ ಗಲಾಟೆ ಮಾಡಿಕೊಂಡಿದ್ದರು ಮತ್ತು ಅವರ ವೈಷಮ್ಯವನ್ನು ಕಟ್ಟಿಕೊಂಡಿದ್ದರು ಎಂದರೆ ಸರಿಯಲ್ಲ. ನಿಮ್ಮ ತಾಯಿಗೆ ಮದ್ಯವನ್ನು ಸೇವಿಸುವ ಅಭ್ಯಾಸ ಇತ್ತು ಎಂದರೆ ಸಾಕ್ಷಿ ಆಗಾಗ್ಗೆ ಸೇವಿಸುತ್ತಿದ್ದರು ಎನ್ನುತ್ತಾರೆ. ನಿಮ್ಮ ತಾಯಿ ಅತೀಯಾಗಿ ಮದ್ಯವನ್ನು ಸೇವಿಸಿ ಆಗಾಗ್ಗೆ ರಸ್ತೆಯಲ್ಲಿ ಬಿದ್ದು ಪೆಟ್ಟು ಮಾಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ಒಮ್ಮೆ ನನ್ನ ತಾಯಿ ಬಿದ್ದು ಆಕೆಯ ಕೈ ತರಚಿತ್ತು, ಅದರೆ ಆಕೆಗೆ ಯಾವುದೇ ದೊಡ್ಡ ಗಾಯಗಳು ಆಗಿರಲಿಲ್ಲ ಎನ್ನುತ್ತಾರೆ.

19. ಚಾಸಾ.9 ರವರು ನನಗೆ ಕರೆ ಮಾಡಿದಾಗ ನಾನು ಮಾಡ್ಕಲಿನಲ್ಲಿರುವ ನನ್ನ ತಾಯಿಯ ತಂದೆಯ ಮನೆಯಲ್ಲಿದ್ದೆನು. ಅವರು ಫೋನ್ ಮಾಡಿದಾಗ ಸಮಯ ಬೆಳಿಗ್ಗೆ 6 ಗಂಟೆಯಾಗಿತ್ತು. ಆ ಸಮಯದಲ್ಲಿ ನಾನು ಮನೆಯಲ್ಲಿ ಒಬ್ಬನೇ ಇದ್ದೆನು. ಅಲ್ಲಿಂದ ಚಿಕ್ಕಮಗಳೂರಿಗೆ 30 ರಿಂದ 32 ಕಿ.ಮೀ. ದೂರವಾಗುತ್ತದೆ. ನಾನು ಚಾಸಾ.3 ಮತ್ತು 4 ರವರಿಗೆ ಫೋನ್ ಮಾಡಿ ಕರೆಸಿಕೊಂಡು ಒಟ್ಟಿಗೆ ಸ್ಥಳಕ್ಕೆ ಹೋದೆವು. ನಾನು ನನ್ನ ಬೈಕಿನಲ್ಲಿ ಹೋದೆನು, ಚಾಸಾ.3 ಮತ್ತು 4 ರವರು ಒಂದು ಬೈಕಿನಲ್ಲಿ ಬಂದರು. ಚಾಸಾ.3 ಮತ್ತು 4 ರವರ ಮನೆ ಕೆಳಗೂರಿನಲ್ಲಿದೆ. ನಮ್ಮ ಗ್ರಾಮದಿಂದ ಅಲ್ಲಿಗೆ 15

ಕಿ.ಮೀ. ದೂರವಾಗುತ್ತದೆ. ಚಾಸಾ.3 ಮತ್ತು 4 ರವರು ನಿಮ್ಮ ಮನೆಗೆ ಬಂದು ಅಲ್ಲಿಂದ ಹೊರಟರೆ ಎಂದರೆ ಸಾಕ್ಷಿ ನಮ್ಮೂರಿನಿಂದ ಚಿಕ್ಕಮಗಳೂರಿಗೆ ಬರಲು ಕೆಳಗೂರಿನ ಮೂಲಕವೇ ಬರಬೇಕು ಹಾಗಾಗಿ ನಾನು ಕೆಳಗೂರಿಗೆ ಹೋದೆನು ಅಲ್ಲಿಂದ ಚಾಸಾ.3 ಮತ್ತು 4 ರವರು ನನ್ನೊಂದಿಗೆ ಬಂದರು ಎನ್ನುತ್ತಾರೆ.

20. ನಾವು ಚಿಕ್ಕಮಗಳೂರಿಗೆ ಬಂದಾಗ ಸಮಯ ಬೆಳಿಗ್ಗೆ 7.10 ರಿಂದ 7.15 ಗಂಟೆಯಾಗಿತ್ತು. ನಾವು ಮೊದಲಿಗೆ ಘಟನೆ ನಡೆದ ಸ್ಥಳಕ್ಕೆ ಹೋದೆವು. ಆಗ ಸ್ಥಳದಲ್ಲಿ ನನ್ನ ತಾಯಿಯ ಶವ ಇರಲಿಲ್ಲ, ಆಕೆಯನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ಸ್ಥಳದಲ್ಲಿ ನಿಮಗೆ ಯಾವುದೇ ವಿಶೇಷವಾದ ಗುರುತುಗಳು ಇರಲಿಲ್ಲ ಎಂದರೆ ಸಾಕ್ಷಿ ಚಾಸಾ.9 ರವರು ನನಗೆ ಫೋನ್ ಮಾಡಿದಾಗ ಸ್ಥಳದ ಬಗ್ಗೆ ತಿಳಿಸಿದ್ದರು ಮತ್ತು ನಾವು ಹೋಗಿ ನೋಡಿದಾಗ ಅಲ್ಲಿ ರಕ್ತದ ಕಲೆಗಳು ಇದ್ದವು ಎನ್ನುತ್ತಾರೆ. ಸದರಿ ಸ್ಥಳದಲ್ಲೇ ನಿಮ್ಮ ತಾಯಿ ಮೃತಪಟ್ಟಿದ್ದು ಎಂದು ನಿಮಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸಾಕ್ಷಿ ಖುದ್ದಾಗಿ ಗೊತ್ತಿಲ್ಲ ಆದರೆ ಚಾಸಾ.9 ರವರು ತಿಳಿಸಿದ್ದರು ಎನ್ನುತ್ತಾರೆ. ಚಾಸಾ.9 ರವರು ಸ್ಥಳದ ಬಗ್ಗೆ ತಿಳಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

21. ನಾವು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಹೋದಾಗ ಸಮಯ ಬೆಳಿಗ್ಗೆ 7.35 ಗಂಟೆಯಾಗಿತ್ತು. ಅಲ್ಲಿ ಸುಮಾರು 10 ನಿಮಿಷಗಳ ಕಾಲ ಇದ್ದೆನು. ಅಲ್ಲಿ ಪೊಲೀಸರು ಇದ್ದರೇ ಮತ್ತು ಎಷ್ಟು ಜನರು ಸೇರಿದ್ದರು ಎಂದರೆ ಸಾಕ್ಷಿ ಗೊಂದಲ ಮತ್ತು ಆಘಾತದಲ್ಲಿದ್ದ ನಾನು ಅಲ್ಲಿ ಯಾರೆಲ್ಲಾ ಇದ್ದರು ಎಂದು ಗಮನಿಸಿಲ್ಲ ಎನ್ನುತ್ತಾರೆ. ಅಲ್ಲಿಂದ ನಾನು ಠಾಣೆಗೆ ಹೋದಾಗ

ಸಮಯ ಬೆಳಿಗ್ಗೆ 8 ಗಂಟೆಯಾಗಿತ್ತು. ಠಾಣೆಗೆ ನನ್ನೊಂದಿಗೆ ಚಾಸಾ.3 ಮತ್ತು 4 ರವರು ಬಂದಿದ್ದರು.

22. ನಿಪಿ.1 ರ 2 ನೇ ಪುಟದ ಕೊನೆಯಲ್ಲಿರುವ 'ಸಹಿ' ಎಂಬ ಪದ ಮತ್ತು 3 ನೇ ಪುಟದ ಕೊನೆಯಲ್ಲಿರುವ 'ಮುಂದುವರೆದಿದೆ' ಎಂಬ ಪದಗಳನ್ನು ನೀವೇ ಬರೆದಿದ್ದೀರಾ ಎಂದರೆ ಸಾಕ್ಷಿ ನಿಪಿ.1 ರ 2 ನೇ ಪುಟದ ಕೊನೆಯಲ್ಲಿ ಬರೆದಿರುವುದು ಸಹಿ ಅಲ್ಲ 'ಸಹ' ಎಂದು ಅದನ್ನು ನಾನೇ ಬರೆದಿದ್ದೇನೆ ಆದರೆ 3 ನೇ ಪುಟದ ಕೊನೆಯಲ್ಲಿರುವ 'ಮುಂದುವರೆದಿದೆ' ಎಂಬ ಪದವನ್ನು ನಾನು ಬರೆದಿಲ್ಲ ಎನ್ನುತ್ತಾರೆ. ಇದೇ ರೀತಿ ದೂರನ್ನು ಬರೆಯಬೇಕು ಎಂದು ಪೊಲೀಸರು ನಿಮಗೆ ಹೇಳಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನೀವು ಹೇಳಿದಂತೆ ಯಾವುದೇ ಘಟನೆ ನಡೆಯದಿದ್ದರೂ ಸಹ ಆರೋಪಿಯ ವಿರುದ್ಧ ನಿಪಿ.1 ರಂತೆ ಸುಳ್ಳು ದೂರನ್ನು ಕೊಟ್ಟು ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

23. ಸ್ಥಳದಲ್ಲಿ ಪೊಲೀಸರು ನಿಪಿ.5 ರಂತೆ ಮಹಜರ್ ಬರೆದುಕೊಂಡಿದ್ದಾಗಿ ಹೇಳಿದ್ದೀರಿ ಅದರಲ್ಲಿ ಏನು ಬರೆದಿದೆ ಎಂದು ನಿಮಗೆ ಹೇಳಲಾಗುವುದಿಲ್ಲ ಎಂದರೆ ಸಾಕ್ಷಿ ಸ್ಥಳದಲ್ಲಿ ಏನು ನಡೆದಿತ್ತೋ ಅದನ್ನೇ ಬರೆದುಕೊಂಡಿದ್ದಾರೆ ಎನ್ನುತ್ತಾರೆ. ಅದರಲ್ಲಿ ಏನು ಬರೆದುಕೊಂಡಿದ್ದಾರೆ ಎಂದು ಹೇಳಬಹುದೇ ಎಂದರೆ ಸಾಕ್ಷಿ ನನಗೆ ಗೊತ್ತಿರುವಷ್ಟನ್ನು ಹೇಳುತ್ತೇನೆ ಎನ್ನುತ್ತಾರೆ. ನಿಪಿ.5 ಪಂಚನಾಮೆಯನ್ನು ಜರುಗಿಸಿದ್ದಾರೆ ಎಂದು ಹೇಳಲಾದ ಸ್ಥಳದ ಚಕ್ಕುಬಂದಿಯನ್ನು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಫುಟ್‌ಪಾತ್‌ನ ಎಡಭಾಗದಲ್ಲಿ ಘಟನೆ ನಡೆದಿತ್ತು, ಫುಟ್‌ಪಾತ್ ನ ಎಡಭಾಗದಲ್ಲಿ ಸ್ವಲ್ಪ ಖಾಲಿ ಜಾಗ ಇತ್ತು, ಅಲ್ಲಿಂದ ಸ್ವಲ್ಪ ಮುಂದೆ ಸುಪ್ರೀಮ್ ಮೆಡಿಕಲ್ ಇತ್ತು, ಸ್ಥಳದ ಸ್ವಲ್ಪ ಹಿಂದಕ್ಕೆ ಒಂದು ಹಣ್ಣಿನ

ಅಂಗಡಿ ಮತ್ತು ಚಿಕ್ಕ ಹೋಟೆಲ್ ಇರುವುದನ್ನು ಗಮನಿಸಿದ್ದೆನು ಎನ್ನುತ್ತಾರೆ. ಸದರಿ ವಿವರಗಳನ್ನು ನಿಪಿ.5 ರಲ್ಲಿ ಬರೆಯಲಾಗಿದೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ.5 ರಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನಿಮಗೆ ಮಾಹಿತಿ ಇಲ್ಲದಿದ್ದರೂ ಸಹ ಗೊತ್ತಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

24. ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ತೋರಿಸಿರುವ ಎಲ್ಲಾ ವ್ಯಕ್ತಿಗಳು ನಿಮ್ಮ ಸಂಬಂಧಿಕರು ಮತ್ತು ಸ್ನೇಹಿತರು ಎಂದರೆ ಸರಿಯಲ್ಲ. ನಿಪಿ.6 ಫೋಟೋದಲ್ಲಿ ಕಂಡುಬರುವ ಸ್ಥಳದಲ್ಲಿ ಎಲ್ಲಿಯೂ ರಕ್ತದ ಕಲೆಗಳು ಬಿದ್ದಿರುವುದು ಕಂಡುಬರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಫೋಟೋದಲ್ಲಿ ರಕ್ತವನ್ನು ಸಂಗ್ರಹಿಸುತ್ತಿರುವುದು, ಖಾಕಿ ಕವರಿಗೆ ಹಾಕುತ್ತಿರುವುದು ಕಂಡುಬರುವುದಿಲ್ಲ ಎಂದರೆ ಸರಿ. ನೀವು ಗುರುತಿಸಿದ ನಿಪಿ.6 ಫೋಟೋದಲ್ಲಿ ಮು.ಮಾ.1 ರಿಂದ 3 ಬ್ಯಾಂಡೇಜ್ ಬಟ್ಟೆಗಳು ಕಂಡುಬರುವುದಿಲ್ಲ ಎಂದರೆ ಸರಿ. ಸದರಿ ಬಟ್ಟೆಗಳನ್ನು ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

25. ನಿಮ್ಮ ತಾಯಿ ಅತೀಯಾಗಿ ಮದ್ಯವನ್ನು ಸೇವಿಸಿ ಕಲ್ಲಿನ ಮೇಲೆ ಬಿದ್ದು ಮೃತಪಟ್ಟಿದ್ದು ಆಕೆಯ ಸಾವಿಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಊರು ಕುರುವಂಗಿ. ಅಲ್ಲಿ ನಿಮ್ಮ ತಂದೆಗೆ ಸೇರಿದ ಆಸ್ತಿ ಇದೆಯೇ ಎಂದರೆ ಸಾಕ್ಷಿ ನನ್ನ ತಂದೆ ತೀರಿಹೋದ ಬಳಿಕ ಅದು ಭಾಗವಾಗಿತ್ತು ಎನ್ನುತ್ತಾರೆ. ಅದರಲ್ಲಿ ನಿಮಗೆ ಪಾಲು ಬಂದಿತ್ತೇ ಎಂದರೆ ಸಾಕ್ಷಿ ವಿಭಾಗವಾದ ಸಮಯದಲ್ಲಿ ನನ್ನ ಅಜ್ಜ ನನ್ನ ತಾಯಿಗೆ ಹಣವನ್ನು ಕೊಟ್ಟಿದ್ದರು ಎನ್ನುತ್ತಾರೆ. ನೀವು ಹೇಳಿದಂತೆ ನಿಮ್ಮ ತಾಯಿಗೆ ಯಾವುದೇ ಹಣ ಅಥವಾ ಆಸ್ತಿಯಲ್ಲಿ ಪಾಲನ್ನು ಕೊಡದಿದ್ದ ಕಾರಣ

ಆಕೆ ಕುರುವಂಗಿಯಲ್ಲಿರುವ ನಿಮ್ಮ ತಂದೆಯ ಮನೆಯವರೊಂದಿಗೆ ವೈಷಮ್ಯ ಬೆಳೆಸಿಕೊಂಡಿದ್ದರು ಎಂದರೆ ಸರಿಯಲ್ಲ.

26. ದಿಃ 10-05-2024 ರಂದು ಬೆಳಿಗ್ಗೆ 6 ಗಂಟೆಗೆ ಚಾಸಾ.9 ಉಮೇಶ್ ರವರು ನನ್ನ ಮೊಬೈಲಿಗೆ ಫೋನ್ ಮಾಡಿ ಆ ದಿನ ಬೆಳಗಿನ ಜಾವ ಸುಮಾರು 2.30 ಗಂಟೆಗೆ ತಾನು ಐ.ಜಿ. ರಸ್ತೆಯಲ್ಲಿರುವ ಅಂಗಡಿಗಳಿಗೆ ಮತ್ತು ಬೇಕರಿಗಳಿಗೆ ಹಾಲನ್ನು ಹಾಕುತ್ತಿದ್ದಾಗ ನನ್ನ ತಾಯಿ  ಐ.ಜಿ. ರಸ್ತೆಯಲ್ಲಿರುವ ಸುಪ್ರೀಮ್ ಮೆಡಿಕಲ್ಸ ಹತ್ತಿರ ಇರುವ ಪುಟಪಾತ್ ನಲ್ಲಿ ಮಲಗಿದ್ದಾಗಿ ಆಗ ಆರೋಪಿ ಆಕೆಯ ಹತ್ತಿರ ಹೋಗಿ ತನ್ನ ಕಾಲನ್ನು ಒತ್ತುವಂತೆ ಹೇಳಿದಾಗ ಆಕೆ ನಿನ್ನ ಕಾಲನ್ನು ನಾನು ಯಾಕೆ ಒತ್ತಬೇಕು ಹೋಗು ಎಂದು ಹೇಳಿದಾಗ ಆರೋಪಿಗೆ ಸಿಟ್ಟು ಬಂದು ಅಲ್ಲಿ ಬಿದ್ದಿದ್ದ ಒಂದು ಸೈಜ್ ಕಲ್ಲನ್ನು ತೆಗೆದುಕೊಂಡು ಬಂದು ನನ್ನ ತಾಯಿಯ ತಲೆಯ ಮೇಲೆ ಎತ್ತಿ ಹಾಕಿ ಆಕೆಯನ್ನು ಸಾಯಿಸಿದ್ದಾಗಿ, ಆಗ ತಾನು ಮತ್ತು ಚಾಸಾ.10 ರವಿರವರು ಆರೋಪಿಯನ್ನು ತಡೆಯಲು ಹೋದಾಗ ಆರೋಪಿ ಅವರನ್ನು ಕುರಿತು, ಸೂಳೆಮಕ್ಕಳಾ, ನೀವು ಬಿಡಿಸಲು ಬಂದರೆ ನಿಮಗೂ ಹೊಡೆಯುತ್ತೇನೆ ಎಂದು ಹೆದರಿಸಿದ್ದಾಗಿ, ಆದರೂ ಸಹ ತಾನು ಮತ್ತು ಚಾಸಾ.10 ರವರು ಆರೋಪಿಯನ್ನು ತಡೆದು ಆಂಬ್ಯುಲೇನ್ಸ್ ಕರೆಸಿ ಅದರಲ್ಲಿ ನನ್ನ ತಾಯಿಯನ್ನು ಚಿಕ್ಕಮಗಳೂರು  ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗಿ, ಅಲ್ಲಿ ವೈದ್ಯರು ನನ್ನ ತಾಯಿಯನ್ನು ಪರೀಕ್ಷಿಸಿ ಆಕೆ ಮೃತಪಟ್ಟಿದ್ದಾಗಿ ತಿಳಿಸಿದ್ದಾಗಿ ನನಗೆ ತಿಳಿಸಿದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

27. ನಂತರ ನಾನು ಅದೇ ದಿನ ಬೆಳಿಗ್ಗೆ 8 ಗಂಟೆಗೆ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಗೆ ಹೋಗಿ ತನ್ನ ತಾಯಿಯನ್ನು ಕೊಲೆ

ಮಾಡಿದ್ದ ಆರೋಪಿಯ ಮೇಲೆ ಕ್ರಮ ಜರುಗಿಸುವಂತೆ ನಿಪಿ.1 ರಂತೆ ದೂರನ್ನು ಕೊಟ್ಟೆನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

28. ನಂತರ ಅದೇ ದಿನ ಅಂದರೆ ದಿಃ 10-05-2024 ರಂದು ನಾನು ಮೇಲೆ ಹೇಳಿದಂತೆ ಚಿಕ್ಕಮಗಳೂರಿನ ಐ.ಜಿ. ರಸ್ತೆಯಲ್ಲಿರುವ ಸುಪ್ರೀಮ್ ಮೆಡಿಕಲ್ಸ್ ಹತ್ತಿರ ಇರುವ ಫುಟಪಾತ್ ನಲ್ಲಿ ಘಟನೆ ನಡೆದ ಸ್ಥಳಕ್ಕೆ ಪೊಲೀಸರು ಬಂದಿದ್ದರು, ಆಗ ನಾನು ಸ್ಥಳದಲ್ಲಿ ಹಾಜರಿದ್ದೆನು, ಆಗ ನನ್ನೊಂದಿಗೆ ಚಾಸಾ-5 ಪ್ರದೀಪ್ ಮತ್ತು ಚಾಸಾ-6 ಅವಿನಾಶ್ ರವರು ಇದ್ದರು, ಅವರ ಸಮಕ್ಷಮ ನಾನು ಪೊಲೀಸರಿಗೆ ಕೃತ್ಯ ನಡೆದ ಸ್ಥಳವನ್ನು ತೋರಿಸಿದೆನು, ಅಲ್ಲಿ ಪೊಲೀಸರು ನಿಪಿ.5 ರಂತೆ ಮಹಜರನ್ನು ಬರೆದುಕೊಂಡರು, ನಿಪಿ.6 ರಂತೆ ಫೋಟೋ ತೆಗೆದುಕೊಂಡರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸ್ಥಳದಲ್ಲಿ ರಕ್ತದ ಕಲೆಗಳು ಬಿದ್ದಿದ್ದಾಗಿ, ಅವುಗಳನ್ನು ಪೊಲೀಸರು ಒರೆಸಿ ತೆಗೆದುಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು ಗುರುತಿಸಿದ ಮುದ್ದೆಮಾಲುಗಳಿಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

29. ನೀವು ನ್ಯಾಯಾಧೀಶರ ಮುಂದೆ ಸುಳ್ಳು ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ